# ಜಾಲಿಗೆ ಗ್ರಾಮ ಪಂಚಾಯತಿ ಕಾರ್ಯಾಲಯ

ಜಾಲಿಗೆ ದೇವನಹಳ್ಳಿ ತಾಲ್ಲೂಕು. ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಖ್ಯೆ : ಜಾ.ಗ್ರಾ.ಪಂ....103/೨೦೨೫/೨೬ ದಿನಾಂಕ:- 05/08/25

## ನಿರಾಪೇಕ್ಷಣಾ ಪತ್ರ ( N.O.C )

ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ ಜಾಲಿಗೆ ಗ್ರಾಮ ಪಂಚಾಯಿತಿಯ ಇಂಡ್ರಸನಹಳ್ಳಿ ಗ್ರಾಮದ ಸ.ನಂ 41, 40/1, 40/2, 40/3, ರ ಒಟ್ಟು 14 ಎಕರೆ 05 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಅರ್ಜಿದಾರರಾದ ಮೆ. ವೈಟ್ ಲೋಟಸ್ ಅಲೈಡ್ ಹೋಮ್ಸ್ ಎಲ್ ಎಲ್ ಪಿ ಇಂಡ್ರಸನಹಳ್ಳಿ, ಕುಂದಾಣ ಹೋಬಳಿ ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಅರ್ಜಿ ಸಲ್ಲಿಸಿ ಈ ಜಮೀನಿಗೆ ಮೂಲಭೂತ ಸೌಕರ್ಯ ಒದಗಿಸಲು ಕೋರಿರುತ್ತಾರೆ. ಈ ಜಮೀನುಗಳು ಸರ್ವೆ ನಂ ಜಮೀನುಗಳಾಗಿದ್ದು ಕೃಷಿ ವಲಯದಿಂದ ವಸತಿ ಉದ್ದೇಶಕ್ಕಾಗಿ ಬದಲಾವಣೆ ಮಾಡಲು ಕೋರಿರುತ್ತಾರೆ, ಆದುದರಿಂದ ಭೂ-ಪರಿವರ್ತನೆಗೊಂಡು ಬಯ್ಯಪ್ಪಾದಿಂದ ನಕ್ಷೆ ಅನುಮೋದನೆಗೊಂಡ ನಂತರ ಗ್ರಾಮ ಪಂಚಾಯಿತಿಗೆ ನಿಯಮಾನುಸಾರ ಕಟ್ಟಬೇಕಾದ ಕಂದಾಯ ವಗ್ಗೈರೆಗಳನ್ನು ಕಟ್ಟಿಸಿಕೊಂಡು ಮೂಲಭೂತ ಸೌಕರ್ಯಗಳಾದ ನೀರು ಸರಬರಾಜು, ವಿದ್ಯುತ್ಶಕ್ತಿ ಪಡೆದುಕೊಳ್ಳಲು ಗ್ರಾಮ ಪಂಚಾಯಿತಿಯ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ನಿರಾಪೇಕ್ಷಣಾ ಪತ್ರವನ್ನು ನೀಡಲಾಗುತ್ತಿದೆ.

ಷರತ್ತುಗಳು:-

1. ಸದರಿ ಜಮೀನಿನಲ್ಲಿ ರಾಜಕಾಲುವೆ ಬಂಡಿಜಾಡು, ಸರ್ಕಾರಿ ಗೋಮಾಳ ಬಿ ಖರಾಬು ಗೊಕಟ್ಟೆಗಳು ರಸ್ತೆ, ಕಾಲು ದಾರಿ, ನೀರುಕಾಲುವೆ ಹೊರತು ಪಡಿಸಿ ಅಭಿವೃದ್ಧಿ ಪಡಿಸತಕ್ಕದ್ದು.
2. ಸಕ್ಷಮ ಪ್ರಾಧಿಕಾರಗಳಿಂದ ಕಡ್ಡಾಯವಾಗಿ ಅನುಮತಿ ಪಡೆಯತಕ್ಕದ್ದು.
3. ಜಿಲ್ಲಾಧಿಕಾರಿಗಳು ಮತ್ತು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರಾಧಿಕಾರದಿಂದ ಅನುಮತಿ ಪಡೆದ ನಂತರ ಗ್ರಾಮ ಪಂಚಾಯಿತಿಯಿಂದ ಅನುಮತಿ ಮತ್ತು ಪರಾವನಗಿ ಪಡೆಯುವುದು ಕಡ್ಡಾಯವಾಗಿರುತ್ತದೆ.
4. ಸದರಿ ಪ್ರದೇಶದಲ್ಲಿ ನೀರಿನ ಸೌಲಭ್ಯ ಪಡೆಯುವಾಗ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅನುಮತಿ ಪಡೆದ ನಂತರ ಗ್ರಾಮ ಪಂಚಾಯಿತಿಯ ಅನುಮತಿ ಕಡ್ಡಾಯವಾಗಿ ಪಡೆಯತಕ್ಕದ್ದು ಹಾಗೂ ಈ ಜಮೀನಿನಲ್ಲಿ ಹಾದು ಹೋಗುವ ರಸ್ತೆ ಮತ್ತು ರೈತರ ಹೊಲಗಳಿಗೆ ಹೋಗುವ ರಸ್ತೆ ಸಂಪರ್ಕವನ್ನು ಕಡಿತಗೊಳಿಸಬಾರದು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಜಾಲಿಗೆ ಗ್ರಾಮ ಪಂಚಾಯಿತಿ
ದೇವನಹಳ್ಳಿ ತಾಲ್ಲೂಕು
05/8/2025